ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 9–12–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಮಾಜಿ ಮುಖ್ಯಮಂತ್ರಿ ದಿ: ಎಸ್. ನಿಜಲಿಂಗಪ್ಪನವರ 112 ನೇ ಜನ್ಮ ದಿನಾಚರಣೆ ಪ್ರಯುಕ್ತ ಅವರ ಪ್ರತಿಮೆಗೆ ಮಾಲಾರ್ಪಣೆ :<br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 10–12–2014<br>ಬುಧವಾರ<br>ಬೆಳಗ್ಗೆ<br>10–00 ಗಂಟೆಗೆ | ವಿಧಾನ ಸೌಧದ ಪಶ್ಚಿಮ ದಿಕ್ಕಿನಲ್ಲಿರುವ ದಿ: ಎಸ್. ನಿಜಲಿಂಗಪ್ಪನವರ ಅವರ ಪ್ರತಿಮೆ ಬಳಿ |
| 2. | ಪತ್ರಿಕಾಗೋಷ್ಠಿ:–<br>ಶ್ರೀ ನಾರಾಯಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ. ಬೆಂಗಳೂರು.<br>ಸಂಪರ್ಕ ದೂರವಾಣಿ:<br>080–22240445/6<br>(ಮಧ್ಯಾಹ್ನ 1–00 ಗಂಟೆಗೆ ಆಯೋಗದ ಅಧ್ಯಕ್ಷರು, ಯಲಹಂಕ ವಿಧಾನಸಭಾ ಕ್ಷೇತ್ರದ "ಕೋಗಿಲು" ಸಫಾಯಿ ಕರ್ಮಚಾರಿ ಕಾಲೋನಿಗೆ ಸ್ಥಳ ಪರಿಶೀಲನೆಗಾಗಿ ಭೇಟಿ ನೀಡುವರು) | 10–12–2014<br>ಬುಧವಾರ<br>ಬೆಳಗ್ಗೆ 11–00 ಗಂಟೆಗೆ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕಚೇರಿ, 4ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,<br>ಬೆಂಗಳೂರು – 560 027. |
| 3. | 7 ನೇ ಅಂತರರಾಷ್ಟ್ರೀಯ ಸಿನಿಮೋತ್ಸವದ ಅಂಗವಾಗಿ "ಸಮಕಾಲೀನ ಕನ್ನಡ ಚಿತ್ರರಂಗದ | 10–12–2014<br>ಬುಧವಾರ<br>ಬೆಳಗ್ಗೆ 11–00 ಗಂಟೆಗೆ | ಸಭಾಂಗಣ, ನೆಲಮಹಡಿ, ವಾರ್ತಾಸೌಧ., ಭಗವಾನ್ ಮಹಾವೀರ ರಸ್ತೆ, |

| | | | |
|---|---|---|---|
| | ಮುಂದಿರುವ ಸವಾಲುಗಳ ಕುರಿತಂತೆ ಮಾತುಕತೆ”.<br><br>ಪಾಲ್ಗೊಳ್ಳುವವರು:<br><br>ಶ್ರೀ ಎನ್. ಆರ್. ನಂಜುಂಡೇಗೌಡ, ಚಿತ್ರ ನಿರ್ದೇಶಕರು,<br><br>ಶ್ರೀ ವಿ.ಆರ್. ರಾಮದಾಸ ನಾಯ್ಡು, ಚಿತ್ರ ನಿರ್ದೇಶಕರು, ನಿರ್ಮಾಪಕರು,<br><br>ಶ್ರೀ ಸುರೇಶ್ ಹೆಬ್ಳಿಕರ್, ಚಲನಚಿತ್ರ ನಟ, ನಿರ್ದೇಶಕರು.<br><br>ಶ್ರೀ ರಾಮು, ಚಿತ್ರ ನಿರ್ಮಾಪಕರು, | | ಬೆಂಗಳೂರು – 560 001. |
| 4 | 7 ನೇ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಪ್ರದರ್ಶನ ಕಂಡ ಸಿನಿಮಾಗಳ ಚಿತ್ರತಂಡಗಳ ಪ್ರಮುಖರ ಜೊತೆ ಮಾತುಕತೆ.<br><br>ಪಾಲ್ಗೊಳ್ಳುವವರು:<br><br>ಖಲೀಲ್ ಆಬಿ, ನಿರ್ಮಾಪಕರು – ದುಖ್ತರ್, (ಪಾಕಿಸ್ತಾನಿ)<br><br>ನಾದಿಯಾ, ಚಿತ್ರ ನಟಿ – ದುಖ್ತರ್ – (ಪಾಕಿಸ್ತಾನಿ)<br><br>ರಜಿನಿ ಬಸಮ್‌ತಾರಿ – ನಿರ್ದೇಶಕರು – ರಾಗ್–ದ–ರಿದಮ್ ಆಫ್ ಲವ್ – ಅಸ್ಸಾಮಿ. | 10–12–2014<br>ಬುಧವಾರ<br>ಮಧ್ಯಾಹ್ನ 2–30 ಗಂಟೆಗೆ | ಸಭಾಂಗಣ, ನೆಲಮಹಡಿ,<br>ವಾರ್ತಾಸೌಧ.,<br>ಭಗವಾನ್ ಮಹಾವೀರ ರಸ್ತೆ,<br>ಬೆಂಗಳೂರು – 560 001. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಕೆರೆಗಳ ಒತ್ತುವರಿ ಕುರಿತು ಮಾಹಿತಿ ಒದಗಿಸಿ

ಬೆಂಗಳೂರು, ಡಿಸೆಂಬರ್ 9 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ಮತ್ತು ಸುತ್ತಮುತ್ತಲಿನ ಕೆರೆಗಳು ಒತ್ತುವರಿಯಾಗಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಿ, ಅವುಗಳ ಸಂರಕ್ಷಣೆಗಾಗಿ ಸೂಕ್ತ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸಲು ವಿಧಾನಸಭೆಯ ಸದಸ್ಯರಾದ ಶ್ರೀ ಕೆ.ಬಿ. ಕೋಳಿವಾಡ ರವರ ಅಧ್ಯಕ್ಷತೆಯಲ್ಲಿ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯು ಕೆರೆಗಳ ವಿವರಗಳನ್ನು ಪರಿಶೀಲಿಸುತ್ತಿದೆ.

ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ಕೆರೆಗಳ ಒತ್ತುವರಿ/ಅತಿಕ್ರಮಣಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಮಾಹಿತಿ ಮತ್ತು ದಾಖಲೆಗಳಿದ್ದಲ್ಲಿ ಅವುಗಳನ್ನು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ದಿನಾಂಕ 31-12-2014 ರೊಳಗಾಗಿ ತಲುಪಿಸಲು ಕೋರಿದೆ. ಶ್ರೀ ಎಂ.ಕೆ. ವಿಶಾಲಾಕ್ಷಿ, ಉಪ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ಕೊಠಡಿ ಸಂಖ್ಯೆ 128 (ಎ) ಮೊದಲನೆ ಮಹಡಿ, ವಿಧಾನಸೌಧ, ಬೆಂಗಳೂರು. ಇ-ಮೇಲ್ ವಿಳಾಸ kla.legkarnatakagmail.com ದೂರವಾಣಿ 22256890, 22033161, 22353134, 22033328.

ಸಮ:ಬಾಬು:ಜಿಪಿಆರ್.

## ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ರಾಜ್ಯ ಮಟ್ಟದ ಸಮ್ಮೇಳನ

ಬೆಂಗಳೂರು, ಡಿಸೆಂಬರ್ 9 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ 17ನೇ ರಾಜ್ಯ ಮಟ್ಟದ ದ್ವೈವಾರ್ಷಿಕ ಸಮ್ಮೇಳನವು ಡಿಸೆಂಬರ್ 13 ಮತ್ತು 14 ರಂದು ಬೆಂಗಳೂರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದೆ.

ಸಮ್ಮೇಳನದ ಉದ್ಘಾಟನಾ ಸಮಾರಂಭವು ಡಿಸೆಂಬರ್ 13 ರಂದು ಬೆಳಿಗ್ಗೆ 10-35 ಗಂಟೆಗೆ ನಡೆಯಲಿದೆ. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಶ್ರೀ ಎಚ್. ಎಲ್. ದತ್ತು ಅವರು ಸಮ್ಮೇಳನವನ್ನು ಉದ್ಘಾಟಿಸುವರು. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ, ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ರಾಜ್ಯದ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ.ಬಿ. ಜಯಚಂದ್ರ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ರಾಜ್ಯದ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಶ್ರೀ ಡಿ.ಹೆಚ್. ವಘೇಲ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಸಮ್ಮೇಳನದ ಸಮಾರೋಪ ಸಮಾರಂಭವು ಡಿಸೆಂಬರ್ 14 ರಂದು ಮಧ್ಯಾಹ್ನ 2-30 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದ್ದು ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ ಅವರು ಸಮಾರೋಪ ಭಾಷಣ ಮಾಡುವರು. ರಾಜ್ಯದ ಉಚ್ಛ ನ್ಯಾಯಾಯಾದ ಮುಖ್ಯ ನ್ಯಾಯಾಧೀಶ ಶ್ರೀ ಡಿ.ಹೆಚ್. ವಘೇಲ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸುವರು. ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್ ಮತ್ತು ರಾಜ್ಯ ಲೋಕೋಪಯೋಗಿ, ಬಂದರು, ಒಳನಾಡು ಜಲ ಸಾರಿಗೆ ಖಾತೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಮ:ಬಾಬು;ಜಿಪಿಆರ್

## INFORMATION REGARDING ENCROACHMENT OF LAKES

Bangaloe, December 9 (Karnataka Information)

A House Committee has been constituted under the chairmanship of Sri K.B. Koliwad, M.L.A. to investigate and report on the encroachment of lakes in and around Bangalore and to suitably recommend for restoration of such lakes, as, many lakes in and around Bangalore are encroached. The committee is examining the details of the lakes. Public and Institutions are invited to submit any such informatiom/records if they have, to the under metnioned address either personally or by post on or before 31-12-2014.

Smt M.K. Vishalakshi, Deputy Secretary, Karnataka Legislative Assembly, Room No. 128 (A) 1st Floor, Vidhana Soudha, Bangalore. e-mail Address: kla.legkarnataka@gmail.com, Phone No 22256890,22033161,22353134, 22033328.

sm/babu/gpr.

## ಪದವಿಪೂರ್ವ ಕಾಲೇಜು ಆರಂಭಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಡಿಸೆಂಬರ್ ೯ (ಕರ್ನಾಟಕ ವಾರ್ತೆ)**

ಪದವಿ ಪೂರ್ವ ಶಿಕ್ಷಣ ನಿಯಮಗಳು 2006 ರ ನಿಯಮ 4 ರನ್ವಯ 2015–16ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ / ಟ್ರಸ್ಟ್‌ಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ " ಅರ್ಜಿ ನಮೂನೆ " ಯಲ್ಲಿ ದಿನಾಂಕ 22–12–2014 ರ ನಂತರ ಹಾಗೂ ದಿನಾಂಕ 22–12–2014 ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಲು ಜಂಟಿ ನಿರ್ದೇಶಕರು (ಮಾನ್ಯತೆ ಮತ್ತು ಅನುದಾನ), ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಅರ್ಜಿಯನ್ನು ಸಲ್ಲಿಸುವುದು. ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಇಲಾಖೆಯ ವೆಬ್‌ಸೈಟ್ www.puc.kar.nic.in ಇಲ್ಲಿಂದ ಹಾಗೂ ಯಾವುದೇ ಸ್ಪಷ್ಟೀಕರಣ ಬೇಕಾದಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಿಂದ ಪಡೆಯಬಹುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

## ವಿಧಾನ ಪರಿಷತ್‌ನಲ್ಲಿ ಅಗಲಿದ ಗಣ್ಯರಿಗೆ ಸಂತಾಪ ಸೂಚನೆ

**ಬೆಳಗಾವಿ:ಡಿಸೆಂಬರ್:9:(ಕರ್ನಾಟಕ ವಾರ್ತೆ):–:**

ಇಂದು ಬೆಳಿಗ್ಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಐದನೇ ರಾಜ್ಯ ವಿಧಾನ ಮಂಡಲದ ಚಳಿಗಾಲ ಅಧಿವೇಶನದ ಪ್ರಾರಂಭದಲ್ಲಿ ಇತ್ತೀಚಿಗೆ ನಿಧನರಾದ ಮಾಜಿ ಸಚಿವರಾದ ಶ್ರೀ.ವಿ.ಎಸ್.ಕೌಜಲಗಿ, ಶ್ರೀ ಜಿ.ಎಸ್ ಅಶ್ವಥ್ ರೆಡ್ಡಿ ಶ್ರೀ ಎಸ್.ಬಿ. ನಾಗರಾಳ್, ಡಾ|| ಹೆಚ್.ಆರ್.ರಾಜು, ಸಾಹಿತಿ ಡಾ.ಯು.ಆರ್.ಅನಂತ ಮೂರ್ತಿ ಹಾಗೂ ಯೋಗ ಗುರು ಬಿ.ಕೆ.ಎಸ್ ಅಯ್ಯಂಗಾರ್ ಅವರಿಗೆ ಸಭಾಪತಿ ಶ್ರೀ ಡಿ.ಹೆಚ್.ಶಂಕರ ಮೂರ್ತಿ ಅವರು ವಿಧಾನ ಪರಿಷತ್‌ನಲ್ಲಿ ಸಂತಾಪ ಸೂಚನೆ ಮಂಡಿಸಿದರು.

ಶ್ರೀ.ವಿ.ಎಸ್.ಕೌಜಲಗಿ ಅವರು ಆರು ಬಾರಿ ವಿಧಾನ ಸಭಾ ಸದಸ್ಯರಾಗಿ, ಸಚಿವರಾಗಿ ಸೇವೆಸಲ್ಲಿಸಿದ ಸರಳ ಸಜ್ಜನಿಕೆಯ ಹಿರಿಯ ರಾಜಕಾರಣಿಯಾಗಿದ್ದರು. ವೃತಿಯಲ್ಲಿ ಕೃಷಿಕರು, ಕೈಗಾರಿಕೋದ್ಯಮಿಯೂ ಆಗಿದ್ದ ಶ್ರೀ ಜಿ.ಎಸ್ ಅಶ್ವಥ್ ರೆಡ್ಡಿ ಅವರು ಇಂಧನ ಖಾತೆ ಸಚಿವರಾಗಿದ್ದಾಗ ಭಾಗ್ಯಜ್ಯೋತಿಯಂತಹ ಉತ್ತಮ ಯೋಜನೆಯನ್ನು ಅವರು ಕೊಡುಗೆಯಾಗಿ ನೀಡಿದ್ದರು. ಶ್ರೀ ಎಸ್.ಬಿ ನಾಗರಾಳ್ ಅವರು ವಿಧಾನ ಸಭಾ ಸದಸ್ಯರಾಗಿ ಹಾಗೂ ಸಚಿವರಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದರು. ಡಾ|| ಹೆಚ್.ಆರ್ ರಾಜು ಅವರು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯರಾಗಿ ಜನರ ಸೇವೆ ಸಲ್ಲಿಸಿದರಲ್ಲದೆ, ವಿವಿಧ ಖಾತೆಯ ಸಚಿವರಾಗಿ ಸೇವೆ ಸಲ್ಲಿಸಿದ್ದರೆಂದು ಸಭಾಪತಿಯವರು ಶ್ಲಾಘಿಸಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಯು.ಆರ್. ಅನಂತ ಮೂರ್ತಿ ಅವರು ಖ್ಯಾತ ಸಾಹಿತಿ ಹಾಗೂ ವಿಮರ್ಶಕರು. ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರ ಅವರ ಹಲವು ಕೃತಿಗಳು ವಿಶ್ವದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಅದೇ ರೀತಿ ಪದ್ಮಭೂಷಣ ಪ್ರಶಸ್ತಿ ವಿಜೇತರಾದ ಯೋಗ ಗುರು ವಿ.ಕೆ.ಎಸ್ ಅಯ್ಯಂಗಾರ್ ಅವರು ಬರೆದ 14 ಪುಸ್ತಕಗಳು 17 ಭಾಷೆಗಳಿಗೆ ಭಾಷಾಂತರವಾಗಿರುವುದಲ್ಲದೆ, ವಿದೇಶಿಕರಿಗೂ ಯೋಗವನ್ನು ಪರಿಚಯಿಸಿದರು. ಇಂತಹ ಮಹಾನ್ ದಿಗ್ಗಜರನ್ನು ರಾಜ್ಯವು ಕಳೆದುಕೊಂಡಿದೆ ಎಂದು ಸಂತಾಪ ಸೂಚಿಸಿದರು.

ಅಗಲಿದ ಗಣ್ಯರಿಗೆ ವಿಧಾನ ಪರಿಷತ್ ನಾಯಕರಾದ ಶ್ರೀ ಎಸ್.ಆರ್.ಪಾಟೀಲ ಹಾಗೂ ವಿರೋಧ ಪಕ್ಷದ ನಾಯಕ ಶ್ರೀ ಕೆ.ಎಸ್.ಈಶ್ವರಪ್ಪ ಅವರು ಸಂತಾಪ ಸೂಚಿಸಿದರು. ನಂತರ ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು.

## ವಿಧಾನ ಪರಿಷತ್ ಕಲಾಪ ನಾಳೆಗೆ ಮುಂದೂಡಿಕೆ

**ಬೆಳಗಾವಿ:ಡಿಸೆಂಬರ್:9:(ಕರ್ನಾಟಕ ವಾರ್ತೆ):-**

ಸಂತಾಪ ಸೂಚನೆಯ ನಂತರ ಪ್ರಾರಂಭವಾದ ವಿಧಾನ ಪರಿಷತ್ ಕಲಾಪವನ್ನು ಸಭಾಪತಿಯವರು ನಾಳೆಗೆ ಮುಂದೂಡಿದರು.

ಸಭಾಪತಿಯವರು ಪ್ರಶ್ನೋತ್ತರ ವೇಳೆಯನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ವಿರೋಧ ಪಕ್ಷದ ನಾಯಕರಾದ ಶ್ರೀ ಕೆ.ಎಸ್. ಈಶ್ವರಪ್ಪ ಅವರು ಕಬ್ಬಿಗೆ ಬೆಂಬಲ ಬೆಲೆ ನಿಗದಿ ಪಡಿಸಿ ಒಂದು ವರ್ಷ ಕಳೆಯುತ್ತಿರುವ ಹಿನ್ನೆಲೆಯಲ್ಲಿ ಸಭೆಯ ಮುಂದೆ ಗೊತ್ತುವಳಿ ಸೂಚನೆಯನ್ನು ಮಂಡಿಸಲು ಮುಂದಾದರು. ಸಭಾಪತಿ ಶ್ರೀ ಡಿ.ಹೆಚ್ ಶಂಕರ ಮೂರ್ತಿಯವರು ನಿಯಮ 59 ರಡಿ ಶ್ರೀ ಈಶ್ವರಪ್ಪ ಅವರು ಸಭೆಗೆ ನೋಟಿಸ್ ನೀಡಿದ್ದಾರೆ, ಪದ್ಧತಿಯಂತೆ ಮೊದಲು ಪ್ರಶ್ನೋತ್ತರ ನಡೆಯಬೇಕು. ಆ ನಂತರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದೆಂದು ಭರವಸೆ ನೀಡಿದರೂ ವಿರೋಧ ಪಕ್ಷದ ಸದಸ್ಯರು ಮಣಿಯದೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವಂತೆ

ಪಟ್ಟು ಹಿಡಿದರು. ಪ್ರತಿಪಕ್ಷದ ಸದಸ್ಯರು ಮೊದಲು ಪ್ರಶ್ನೋತ್ತರ ನಡೆಯಬೇಕೆಂದು ಸಭಾಪತಿಯವರಿಗೆ ಮನವಿ ಮಾಡಿದರು. ಸಭಾಪತಿಯವರು ಸಭೆಯನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

ರಾಜ್ಯದ ಜನತೆಯ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸುವ ಸಲುವಾಗಿಯೇ ಅಧಿವೇಶನವನ್ನು ಏರ್ಪಡಿಸಲಾಗಿದೆ. ನಿಯಮಾನುಸಾರ ಹಾಗೂ ಹಿಂದಿನಿಂದ ನಡೆದು ಬಂದಿರುವ ಸದನದ ಪದ್ಧತಿಯಂತೆ ಕಲಾಪವನ್ನು ನಡೆಸಲು ಅನುವು ಮಾಡಿಕೊಡುವಂತೆ ಸಭಾಪತಿಯವರು ಮನವಿ ಮಾಡಿದರೂ ವಿರೋಧ ಪಕ್ಷದವರು ಮತ್ತೆ ಪ್ರಶ್ನೋತ್ತರಕ್ಕೆ ಅವಕಾಶ ನೀಡದ ಹಿನ್ನೆಲೆಯಲ್ಲಿ, ಮಧ್ಯಾಹ್ನ ಪ್ರಾರಂಭವಾದ ಸಭೆಯನ್ನು ಸಭಾಪತಿಯವರು ವಿಧಾನ ಪರಿಷತ್ ಕಲಾಪವನ್ನು ನಾಳೆಗೆ ಮುಂದೂಡಿದರು.